‘ಓಲ್ಗಾ’ ಎಂಬ ಹೆಸರಿನಿಂದ ದೇಶದಾದ್ಯಂತ ಗುರುತಿಸಿಕೊಂಡಿರುವ ಪೋಪೂರಿ ಲಲಿತಕುಮಾರಿ ತೆಲುಗಿನ ಪ್ರತಿಭಾವಂತ ಸ್ತ್ರೀವಾದೀ ಲೇಖಕಿ, ಚಿಂತಕಿ, ಅನುವಾದಕಿ ಹಾಗೂ ಮಹಿಳಾ ಹಕ್ಕುಗಳ ಹೋರಾಟಗಾರ್ತಿ. ಸದ್ಯ ತೆಲಂಗಾಣದ ಸಿಕಂದರಾಬಾದಿನಲ್ಲಿ ನೆಲೆಸಿರುವ ಓಲ್ಗಾ, 1950ರ ನವೆಂಬರ್ 20ರಂದು ಆಂಧ್ರ ಪ್ರದೇಶದ ಗುಂಟೂರಿನಲ್ಲಿ ಜನಿಸಿದರು. ‘ಸ್ವೇಚ್ಛ’, ‘ನೀಲಿ ಮೇಘಾಲು’, ‘ರಾಜಕೀಯ ಕಥಲು’, ‘ಮಾಕು ಗೋಡಲು ಲೇವು’, ‘ಪ್ರಯೋಗಂ’, ‘ವಿಮುಕ್ತ’ – ಇವು ಅವರ ಬಹುಚರ್ಚಿತ ಕೃತಿಗಳು. ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಪಡೆದ ಅವರ ‘ವಿಮುಕ್ತ’ ಕಥಾಸಂಕಲನವನ್ನು ಯುವ ಅನುವಾದಕ ಅಜಯ ವರ್ಮಾ ಅಲ್ಲೂರಿ ಇತ್ತೀಚೆಗಷ್ಟೇ ಕನ್ನಡಕ್ಕೆ ತಂದಿದ್ದಾರೆ. ತಮ್ಮ ಅಭಿಪ್ರಾಯವನ್ನು ತೀವ್ರವಾಗಿ ಮಂಡಿಸಿ ಆ ಮೂಲಕ ಚರ್ಚೆಯನ್ನು ಹುಟ್ಟುಹಾಕುವ, ವಿವಾದಾತ್ಮಕವಾಗುವ ಹಿಂಜರಿಕೆಯಿಲ್ಲದೆ ನೇರ ನುಡಿಯ ದಿಟ್ಟತನ ಮೈಗೂಡಿಸಿಕೊಂಡಿರುವ ಓಲ್ಗಾ ಎಲ್ಲವನ್ನೂ ಸೈದ್ಧಾಂತಿಕ ಖಚಿತತೆಯಲ್ಲಿ ವಿಶ್ಲೇಷಿಸುವವರು. ಭಿನ್ನ ಚಿಂತನೆಯ ಲೇಖಕಿ ಓಲ್ಗಾ ತಮ್ಮ ಸರಳತೆ ಹಾಗೂ ವಿನೀತಭಾವದಿಂದಲೂ ಸಹೃದಯರ ಗಮನಸೆಳೆದವರು. ಕಳೆದ ಮಾರ್ಚ್ 7–8ರಂದು ಮಂಡ್ಯದಲ್ಲಿ ನಡೆದ ‘ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ’ದ ಸಮಾವೇಶಕ್ಕೆ ದಿಕ್ಸೂಚಿ ಭಾಷಣಕಾರರಾಗಿ ಆಗಮಿಸಿದಾಗ, ಅವರೊಂದಿಗೆ ಕತೆಗಾರ್ತಿ ಸುನಂದಾ ಕಡಮೆ ನಡೆಸಿದ ಸಂದರ್ಶನ ಇಲ್ಲಿದೆ.

